ಪುರಾಣಗಳಲ್ಲೂ ಕಾಗೆಯು ಕಾಣಿಸಿಕೊಳ್ಳುತ್ತದೆ. ಶನಿಯು ತನ್ನ ವಾಹನವಾದ ಕಾಗೆಯ ಮೇಲೆ ಕುಳಿತಿರುತ್ತಾನೆ. ಹಾಗಾಗಿ ಶನಿವಾರದಂದು ಕಾಗೆಗಳಿಗೆ ಆಹಾರವನ್ನಿಡುವುದು ಹಲವು ಕಡೆ ಕಂಡು ಬರುತ್ತದೆ. ಕಾಗೆಯು ಸಾಮಾನ್ಯವಾಗಿ ತನ್ನ ಕತ್ತನ್ನು ಎಡ ಅಥವಾ ಬಲಕ್ಕೆ ಬಗ್ಗಿಸಿ ಆಹಾರ ಹೆಕ್ಕುವುದನ್ನು ಗಮನಿಸಬಹುದು. ಇದಕ್ಕೆ ಹಿರಿಯರು ಹೇಳುತ್ತಿದ್ದ ರಾಮಾಯಣದಲ್ಲಿ ಬರುವ ಕಥೆಯ ಪ್ರಕಾರ, ಒಮ್ಮೆ ರಾಮ ಸೀತೆಯ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿರುತ್ತಾನೆ. ಆಗ ಇಂದ್ರನ ಮಗ ಜಯಂತ ಕಾಗೆಯ ರೂಪದಲ್ಲಿ ಬಂದು ಸೀತೆಯನ್ನು ಕೆಣಕುತ್ತಾನೆ. ಇದರಿಂದ ಸೀತೆ ಹೆದರುತ್ತಾಳೆ. ರಾಮನಿಗೆ ಕಾಗೆಯ ಮೇಲೆ ಕೋಪ ಬಂದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾನೆ. ಕಾಗೆ ತನ್ನ ನಿಜರೂಪ (ಜಯಂತ) ತೋರಿ ಅವನಲ್ಲಿ ಕ್ಷಮೆ ಬೇಡುತ್ತದೆ. ಬ್ರಹ್ಮಾಸ್ತ್ರ ನಿರುಪಯೋಗವಾಗಬಾರದೆಂದು ರಾಮನು ಅದರಿಂದ ಕಾಗೆಯ ಒಂದು ಕಣ್ಣನ್ನು ಕುರುಡು ಮಾಡುತ್ತಾನೆ. ತುಳಸೀದಾಸರು ಬರೆದಿರುವ 'ರಾಮಚರಿತಮಾನಸ'ದಲ್ಲಿಯೂ ಕಾಕಭುಶುಂಡಿ ಎಂಬುವನ ಕಥೆ ಇದೆ. ಋಷಿ ಲೋಮಸನಿಂದ ಕಾಗೆಯಾಗುವಂತೆ ಶಾಪಗ್ರಸ್ತನಾಗಿದ್ದ ಕಾಕಭುಶುಂಡಿಯು ರಾಮನ ಪರಮಭಕ್ತ. ರಾಮನ ಅನುಗ್ರಹದಿಂದ ಆತನು ಕಾಲದೊಂದಿಗೆ ಪಯಣಿಸುವ ಹಾಗೂ ರಾಮನ ಕಥೆಯನ್ನು ಪುನರ್ರಚಿಸಲು ಅರ್ಹನಾಗಿದ್ದ. ರಾಮನು ಯಾವ ಯಾವ ಅವತಾರವನ್ನೆತ್ತುತ್ತಾನೋ ಆಗೆಲ್ಲಾ ಕಾಲಾತೀತನಾಗಿದ್ದ ಈ ಕಾಕಭುಶುಂಡಿಯು ಅಯೋಧ್ಯೆಗೆ ಹೋಗಿ ರಾಮನ ಬಾಲ್ಯದ ಆಟಗಳನ್ನು ಕಂಡು ಸಂತೋಷಪಡುತ್ತಿದ್ದನಂತೆ.

ನಾವು ಚಿಕ್ಕವರಿದ್ದಾಗ ಮನೆಯ ಹೊರಗೆ ಸಣ್ಣ ಲೋಟ, ಚಮಚ, ಬಟ್ಟಲುಗಳನ್ನು ಇಡಲು ಅಮ್ಮ ಬಿಡುತ್ತಿರಲಿಲ್ಲ. ಒಂದು ವೇಳೆ ಮರೆತು ಹಾಗೇನಾದರೂ ಇಟ್ಟುಬಿಟ್ಟಿದ್ದರೆ ಅದು ಯಾವ ಮಾಯದಲ್ಲೋ ಕಾಗೆ ಬಂದು ಅವುಗಳನ್ನು ಎತ್ತಿಕೊಂಡು ಹೋಗುತ್ತಿತ್ತು. ಕೆಲವು ದಿನಗಳ ಅನಂತರ ಅವು ಮನೆಯ ಅಂಗಳದ ಮೂಲೆಯಲ್ಲೋ, ಮತ್ತೆಲ್ಲೋ ಸಿಗುತ್ತಿದ್ದವು. ಕೆಲವೊಮ್ಮೆ ಬೇರೆ ಮನೆಯವರ ಅಂಗಳದಲ್ಲೋ, ಮರದ ಕೆಳಗೋ ನಮ್ಮ ಮನೆಯ ವಸ್ತುಗಳೂ, ಅವರ ಮನೆಯ ಸಾಮಾನುಗಳು ನಮ್ಮ ಮನೆಯ ಅಂಗಳದಲ್ಲೂ ಸಿಗುತ್ತಿದ್ದುದೂ ಉಂಟು. ಒಂದೆರಡು ದಿನ ಬಿಟ್ಟು ಪಕ್ಕದ ಮನೆಯವರು ಚಮಚ, ಬಟ್ಟಲುಗಳನ್ನು ತಂದು, 'ಇವು ನಿಮ್ಮದಾ ನೋಡಿ, ಕಾಗೆ ನಮ್ಮನೆ ಅಂಗಳದಲ್ಲಿ ತಂದು ಹಾಕಿತ್ತು' ಎಂದು ತಂದುಕೊಡುತ್ತಿದ್ದರು. ನಾವು ಕೂಡ ನಮ್ಮ ಮನೆಯಲ್ಲಿ ಕಾಗೆ ಬೀಳಿಸಿದ್ದ ಅವರ ಮನೆಯ ವಸ್ತುಗಳನ್ನು ಹಿಂತಿರುಗಿಸುತ್ತಿದ್ದೆವು. ಕಾಗೆಯದಾದರೂ ಎಂತಹ ದುರ್ಬುದ್ಧಿ ನೋಡಿ. ಒಂದು ವೇಳೆ ಅಂಗಳದಲ್ಲಿ ಬಿದ್ದ ವಸ್ತುಗಳನ್ನು ಹಿಂತಿರುಗಿಸದೆ ಮುಂದೆಂದೋ ಅವರಿಗೋ ಅಥವಾ ನಮಗೋ ಗೊತ್ತಾದಾಗ ನಮ್ಮನಮ್ಮಲ್ಲೇ ಜಗಳ ಹುಟ್ಟುವುದಿಲ್ಲವೇ? ಈ ವಿಷಯದಲ್ಲಿ ಕಾಗೆಯದು ಒಂಥರಾ ನಾರದ ಬುದ್ಧೀನೇ. ಕಾಗೆ ಚಮಚ ತೆಗೆದುಕೊಂಡು ಹೋದರೆ, 'ಅದರಲ್ಲೇನು ತಿನ್ನಕ್ಕೆ ಸಿಗುತ್ತೆ ಅಂತ ತಗೊಂಡು ಹೋಗುತ್ತೋ, ದರಿದ್ರ ಕಾಗೆ' ಅಂತ ದೊಡ್ಡಮ್ಮ ಬೈದುಕೊಳ್ಳುತ್ತಿದ್ದರು. ಆಗೆಲ್ಲ ಸ್ಟೀಲ್ ಪಾತ್ರೆಗಳನ್ನು ಕೊಳ್ಳುವುದೇ ಮನೆಯ ಹೆಂಗಸರಿಗೆ ದೊಡ್ಡ ಸಾಹಸ. ಆದರೆ, ಕಾಗೆಗೆ ಬಹುಶಃ ಬಟ್ಟಲಲ್ಲಿ ಆಹಾರವನ್ನು ಹಾಕಿ ಚಮಚದಿಂದ ತಿನ್ನುವ ಖಯಾಲಿ ಹುಟ್ಟುತ್ತಿತ್ತೋ ಏನೋ? ಒಮ್ಮೆ ಮನೆಯಿಂದ ಹೊಸ ಸ್ಟೀಲ್ ಲೋಟ ಕಾಣೆಯಾಯಿತು. ಮತ್ತೆರಡು ದಿನ ಬಿಟ್ಟು ಚಮಚ ಕಾಣೆಯಾಯಿತು. ಹೀಗೆ ಹದಿನೈದು–ಇಪ್ಪತ್ತು ದಿನಗಳಲ್ಲಿ ಮನೆಯ ಒಂದೆರಡು ಚಿಕ್ಕಪುಟ್ಟ ಪಾತ್ರೆಗಳು, ಸವೆದುಹೋಗಿದ್ದ ಬಟ್ಟೆ ಒಗೆಯುವ ಸೋಪು ಮಾಯವಾದವು. ಮನೆಗೆಲಸಕ್ಕೆ ಬರುತ್ತಿದ್ದ ಗುಡ್ಡೆಪುಟ್ಟಮ್ಮನ (ಅವಳ ಮನೆ ಗುಡ್ಡವೊಂದರ ಮೇಲಿದ್ದುದರಿಂದ ಅವಳಿಗೆ ಆ ಹೆಸರು) ಮೇಲೆ ಎಲ್ಲರಿಗೂ ಅನುಮಾನ. ಆದರೆ, ಅವಳನ್ನು ಕೇಳುವುದು ಹೇಗೆ? ಅಮ್ಮ ಸೂಕ್ಷ್ಮವಾಗಿ ಅವಳಲ್ಲಿ ಕಾಣೆಯಾದ ಪಾತ್ರೆಗಳು, ಸೋಪಿನ ಬಗ್ಗೆ ಹೇಳಿದಾಗ ಅವಳು ತನಗೆ ಗೊತ್ತಿಲ್ಲವೆನ್ನುತ್ತಾ,